Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD




# ಐಶ್ವರ್ಯ

ಸಂಪುಟ: 04 ಸಾಪ್ತಾಹಿಕ ಸಂಚಿಕೆ : 2




Rtn. Francesco Arezzo
R.I. President

Rtn. K. Palaksha
District Governor

ದಿನಾಂಕ: 15.07.2025

Rtn. Anil Kumar
President

Rtn. Krishnappa
Secretary

## ರೋಟರಿ ಐಸಿರಿ ಪರ್ಕಳದ ಸಂಸ್ಥಾಪನಾ ದಿನಾಚರಣೆ



ರೋಟರಿ ಐಸಿರಿ ಪರ್ಕಳದ ಸಂಸ್ಥಾಪನಾ ದಿನಾಚರಣೆಯು ಜುಲೈ 7 ರಂದು ಆರ್.ಸಿ.ಸಿ. ಕಾರ್ಯಾಲಯದಲ್ಲಿ ನಡೆಯಿತು. PDG ರೊ. ರಾಜಾರಾಮ್ ಭಟ್ ರವರು ಚಾರ್ಟರ್ ಪ್ರಮಾಣಪತ್ರಕ್ಕೆ ಹೂಮಾಲೆ ಹಾಕಿ, ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ಆರಂಭದಿಂದಲೂ ಐಸಿರಿಯ ಸದಸ್ಯರ ಜೊತೆಗೆ ತನಗಿರುವ ಉತ್ತಮ ಒಡನಾಟವನ್ನು ಸ್ಮರಿಸಿ, ಐಸಿರಿಯ ಬೆಳವಣಿಗೆ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು, ಮುಂದಿನ ದಿನಗಳಲ್ಲಿ ಗ್ರಾಂಟ್ ಗಳನ್ನೂ ಪಡೆಯುವ ಬಗ್ಗೆಯೂ ಮಾರ್ಗದರ್ಶನ ನೀಡಿದರು. ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಪ್ರಥಮ ವಾರದ ಇ–ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಸ್ಥಾಪಕ ಅಧ್ಯಕ್ಷರಾದ ರೊ. ಕೆ. ಪ್ರಭಾಕರ ಶೆಟ್ಟಿ ಮತ್ತು ಸ್ಥಾಪಕ ಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ರವರಿಗೆ ಶಾಲುಹೊದೆಸಿ ಗೌರವಿಸಲಾಯಿತು. ವಲಯ ಸೇನಾನಿ ರೊ. ಸ್ಮಿತಾ ಕಾಮತ್ ಅವರು ಅಧ್ಯಕ್ಷ ಮತ್ತು ಕಾರ್ಯದರ್ಶಿಯವರಿಗೆ ಪುಸ್ತಕ ಮತ್ತು ಪೆನ್ನನ್ನು ಸ್ಮರಣಿಕೆಯಾಗಿ ನೀಡಿದರು, ಸಂಘಸೇವಾ ನಿರ್ದೇಶಕರಾದ ರೊ. ಸುನಿಲ್ ಕುಮಾರ್, ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ರೊ. ಅನಿಲ್ ಕುಮಾರ್ ಸಭಾಧ್ಯಕ್ಷತೆ ವಹಿಸಿದ್ದರು. ಸ್ಥಾಪಕ ಸದಸ್ಯರಲ್ಲೋರ್ವರಾದ ರೊ. ಕೆ. ಪ್ರಕಾಶ್ ಶೆಣೈಯವರು ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನೀಡಿದ ಸಿಹಿತಿನಿಸನ್ನು ಅಧ್ಯಕ್ಷರು ಉಪಸ್ಥಿತ ಸದಸ್ಯರಿಗೆಲ್ಲ ನೀಡಿದರು. ರೊ. ಕೆ. ಪ್ರಭಾಕರ ಶೆಟ್ಟಿ ಸಭೆಯ ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು.

## ರಾಜಾಂಗಣದಲ್ಲಿ ಇಂಟರಾಕ್ಟ್ ಅಸ್ಸೆಂಬ್ಲಿ



ರೋಟರಿ ಐಸಿರಿಯ ಆತಿಥ್ಯದಲ್ಲಿ ಆಗಸ್ಟ್ 9 ರಂದು ನಡೆಯಲಿರುವ ಇಂಟರಾಕ್ಟ್ ಅಸ್ಸೆಂಬ್ಲಿಯನ್ನು ಶ್ರೀಕೃಷ್ಣ ಮಠದ ರಾಜಾಂಗಣದಲ್ಲಿ ನಡೆಸುವ ಬಗ್ಗೆ ಜುಲೈ 8 ರಂದು ಪರ್ಯಾಯ ಪುತ್ತಿಗೆ ಸ್ವಾಮೀಜಿಯವರನ್ನು, ಅಧ್ಯಕ್ಷರಾದ ರೊ. ಅನಿಲ್ ಕುಮಾರ್, Past A.G. ರೊ. ಮಂಜುನಾಥ ಉಪಾಧ್ಯ, Past A.G. ರೊ. ಡಾ. ಎ. ಗಣೇಶ ಮತ್ತು ನಿಯೋಜಿತ ಅಧ್ಯಕ್ಷರಾ ರೊ. ಸಂದೀಪ್ ಕುಮಾರ್ ಭೇಟಿಯಾಗಿ ಅನುಮತಿ ಪಡೆದು, ಮಠದ ದಿವಾನರಿಗೆ ಮನವಿಪತ್ರ ಸಲ್ಲಿಸಿದರು.



ನಮ್ಮ ಸಮುದಾಯಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈಯವರು ಇಂದು ಹಿರೇಬೆಟ್ಟಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ನರಸಿಂಹ ನಾಯಕ್ ರನ್ನು ಭೇಟಿಯಾಗಿ ಐಸಿರಿಯ ಜುಲೈ 27ರ ತಾಯಿ–ಮಗುವಿನ ಆರೋಗ್ಯ ಮಾಹಿತಿ ಕಾರ್ಯಕ್ರಮಕ್ಕೆ ಅವರ ಸಹಭಾಗಿತ್ವ ಮತ್ತು ಸಂಪೂರ್ಣ ಸಹಕಾರವನ್ನು ಖಚಿತಪಡಿಸಿದರು.

## ಬೌದ್ಧಿಕ ಸಿರಿ

ಆ ಮನೆಯಲ್ಲಿ ತಂದೆಗೆ ನಿತ್ಯ ವಾರ್ತಾಪತ್ರಿಕೆಗಳನ್ನು ಬಹಳ ಹೊತ್ತು ಓದುವ ಹವ್ಯಾಸ. ನಾಲ್ಕು ವರ್ಷದ ಪುಟ್ಟ ಮಗುವಿಗೆ ತಂದೆ ಜೊತೆಗೆ ಯಾವತ್ತೂ ಆಡಬೇಕೆಂಬ ಅಭಿಲಾಷೆ.

ಒಂದು ದಿನ ತಂದೆ ಪತ್ರಿಕೆ ಓದುತ್ತಿರುವಾಗ ಮಗು ಬಂದು ತನ್ನೊಂದಿಗೆ ಆಟವಾಡುವಂತೆ ಹಟ ಮಾಡಲಾರಂಬಿಸಿತು.

ಮಗು ಹೇಗಾದರೂ ಮಾಡಿ ಬೇರೆ ಕೆಲಸದಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕೆಂದುಕೊಂಡ ತಂದೆಯು, ಹಿಂದಿನ ದಿನದ ಪತ್ರಿಕೆಯ ಒಂದು ಪುಟದಲ್ಲಿ ಪ್ರಪಂಚದ ಭೂಪಟವಿತ್ತು. ಆ ಪುಟವನ್ನು ಹರಿದು ತುಂಡು ತುಂಡು ಮಾಡಿ ಮಗುವಿಗೆ ನೀಡಿದರು. ಮತ್ತು ಈ ಪುಟವನ್ನು ಪುನಃ ಸರಿಯಾಗಿ ಜೋಡಿಸಿದ ಕೂಡಲೇ ನಿನ್ನ ಜೊತೆಗೆ ಆಡಲು ಬರುತ್ತೇನೆ ಎಂದು ಮಗುವಿಗೆ ಹೇಳಿದರು.

ಎಷ್ಟೆಂದರೂ ಆ ಪುಟ್ಟ ಮಗುವಿಗೆ ಪ್ರಪಂಚದ ಭೂಪಟ ಹೇಗೆ ತಿಳಿಯುತ್ತದೆ...? ಹಾಗಾಗಿ ಮಗುವು ಆ ಕೆಲಸದಲ್ಲೇ ತಲ್ಲೀನವಾಗಿರುತ್ತದೆ, ತಾನು ಸಾವಕಾಶವಾಗಿ ಅಂದಿನ ಪತ್ರಿಕೆ ಓದ ಬಹುದು ಎಂದೆಣಿಸಿದರು.

ಆದರೆ ಮೂರೇ ನಿಮಿಷದಲ್ಲಿ ಆ ಮಗು ಪ್ರಪಂಚದ ಭೂಪಟವನ್ನು ಸರಿಯಾಗಿ ಜೋಡಿಸಿ ತಂದೆಗೆ ತೋರಿಸಿ, ಈಗ ಆಡಲು ಬರುವಂತೆ ಹೇಳಿತು.

ಆಶ್ಚರ್ಯಚಕಿತರಾದ ತಂದೆಗೆ, ಇಷ್ಟು ಚಿಕ್ಕ ವಯಸ್ಸಿನ ಮಗು ಮಾಡಿದ ಕೆಲಸದ ಬಗ್ಗೆ ಖುಷಿಯೂ ಆಯಿತು ಮತ್ತು ಹೇಗೆ ಮಾಡಲು ಸಾಧ್ಯವಾಯಿತೆಂಬ ಕುತೂಹಲವು ಮೂಡಿತು.

ಮಗುವಿನ ಬಳಿ ಕೇಳಿದಾಗ ಆ ಮಗು ಹೇಳಿತು, ಭೂಪಟವಿದ್ದ ಪುಟದ ಹಿಂದಿನ ಪುಟದಲ್ಲಿ ವ್ಯಕ್ತಿಯ ಚಿತ್ರವಿತ್ತು. ವ್ಯಕ್ತಿಯ ಚಿತ್ರವನ್ನು ಸರಿಯಾಗಿ ಜೋಡಿಸುತ್ತಾ ಹೋದಂತೆ ಪ್ರಪಂಚದ ಚಿತ್ರಣವು ಸರಿಯಾಯಿತು ಎಂದಿತು.

ಇದನ್ನೆಲ್ಲಾ ಗಮನಿಸುತ್ತಿದ್ದ ಅಜ್ಜಿ ಹೀಗೆ ಹೇಳಿದರು:

1. ಯಾವುದೇ ಸಮಸ್ಯೆಯ ಇನ್ನೊಂದು ಮಗ್ಗುಲಲ್ಲಿ ಗಮನಿಸಿದಾಗ ಪರಿಹಾರವೂ ಇರುತ್ತದೆ.

2. ವ್ಯಕ್ತಿತ್ವ ಸರಿ ಹೊಂದಿಸಿಕೊಂಡಾಗ ನಮ್ಮ ಪ್ರಪಂಚವೂ ಸರಿಯಾಗಿ ಹೊಂದಿಕೆಯಾಗುತ್ತದೆ.

**ರೋಟರಿ ಸಂಸ್ಥೆಯ ಗುರಿಯೂ ಇದೇ ತಾನೇ...!**

## ಪದಪ್ರದಾನ ಸಮಾರಂಭದ ಬಗ್ಗೆ

ರೋಟರಿ ಐಸಿರಿಯ ಪದಪ್ರದಾನ ಸಮಾರಂಭ ಯಾವತ್ತೂ ಯಾವುದೇ ಗೊಂದಲವಿಲ್ಲದೇ ಅಚ್ಚುಕಟ್ಟಾಗಿ ನಡೆಯುತ್ತದೆ. ಅದಕ್ಕೆಲ್ಲಾ ಕಾರಣ, ಸಾಕಷ್ಟು ಪೂರ್ವತಯಾರಿ ಮತ್ತು "the art of delegation" "ನಿಯೋಜನೆಯ ಕಲೆ" ಅಥವಾ "ಕೆಲಸವನ್ನು ಹಂಚುವ ಕಲೆ".


ಈ ಬಾರಿಯೂ ಯಾವ ಕೆಲಸ ಯಾರು ಮಾಡುತ್ತಾರೆ, ಹೇಗೆ ಮಾಡುತ್ತಾರೆ, ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಎನ್ನುವುದೆಲ್ಲವೂ ಪಕ್ಕಾ ಯೋಜಿತ.

ರೊ. ಡಾ. ಸ್ವಾತಿ ಪೈಯವರ ಪ್ರಾರ್ಥನೆ, ರೊ. ಸಂದೀಪ್ ಕುಮಾರ್ ಮಾಡಿದ ಪದಪ್ರದಾನ ಅಧಿಕಾರಿಯ ಪರಿಚಯ, ರೊ. ಡಾ. ಎ.ಗಣೇಶ್ ಅವರು ಮಾಡಿದ ನೂತನ ಅಧ್ಯಕ್ಷರ ಮತ್ತು ಕಾರ್ಯದರ್ಶಿ ಯವರ ಪರಿಚಯ ಮತ್ತು ಗಣ್ಯರ ಗುರುತಿಸುವಿಕೆ, ರೊ. ಗೀತಾಶ್ರೀ ಎಂ ಉಪಾಧ್ಯ ಅವರು ನಡೆಸಿಕೊಟ್ಟ ನೂತನ ಸದಸ್ಯರ ಪರಿಚಯ, ರೊ. ವಿಠ್ಠಲ ವಾಗ್ಲೆಯವರು ಮಾಡಿದ ವಲಯ ಸೇನಾನಿಯವರ ಪರಿಚಯ, ಸಹಾಯಕ ಗವರ್ನರ್ ಅವರನ್ನು ಪರಿಚಯಿಸಿದ ರೊ. ಮಂಜುನಾಥ ಉಪಾಧ್ಯ, ವೈದ್ಯರ ಮತ್ತು ಲೆಕ್ಕಪರಿಶೋಧಕರ ಗುರುತಿಸುವಿಕೆಯ ಜವಾಬ್ದಾರಿಹೊಂದಿದ ರೊ.ಕೆ.ಪ್ರಕಾಶ್ ಶೆಣೈ,ವಿದ್ಯಾರ್ಥಿವೇತನ ಕಾರ್ಯಕ್ರಮ ನಿರ್ವಹಿಸಿದ ರೊ. ಕೆ. ಪ್ರಭಾಕರ ಶೆಟ್ಟಿ, ವಿದ್ಯಾರ್ಥಿ ವೇತನದ ದಾನಿ ರೊ. ಬಿ. ರಾಮಕೃಷ್ಣ ಪೂಂಜಾ ಮತ್ತು ರೊ.ಸುಶೀಲಾ ಆರ್. ಪೂಂಜಾ ಕೃಷಿಕರ ಸನ್ಮಾನ ನಿರ್ವಹಿಸಿದ ರೊ. ಸುಕೇಶ್ ಕುಂದರ್ ಮತ್ತು ರೊ. ನಾಗರಾಜ ನಾಯಕ್, ಅದೃಷ್ಟಶಾಲಿ ವ್ಯಕ್ತಿಯ ಆಯ್ಕೆ ನಡೆಸಿದ ರೊ. ಡಾ. ಪ್ರಭಾಕರ ಯು. ರೆಂಜಾಳ, ಸುಂದರ ಚಿತ್ರಗಳನ್ನು ಸೆರೆಹಿಡಿದ ರೊ. ನಿಧೀಶ್ ಶುಚಿ ರುಚಿಯಾದ ಭೋಜನ ತಯಾರಿಸಿ ಬಡಿಸಿದ ರೊ. ನಾಗರಾಜ ಭಟ್, ನೂತನ ಸದಸ್ಯರಾಗಿ ಸೇರ್ಪಡೆಕೊಂಡ ರೊ. ಸುದರ್ಶನ ಎಸ್ ಪೈ ಮತ್ತು ರೊ. ಸುಶಾಂತ್ ಕುಮಾರ್ ತೋನ್ಸೆ, ಕಾರ್ಯಕ್ರಮ ನಿರ್ವಹಣೆ ಮಾಡಿದ ರೊ. ಗುರುಪ್ರಸಾದ್ ಕಾಮತ್ ಮತ್ತು ರೊ. ರಾಜೇಶ್ ಡಿ. ಶೆಣೈ, ಸಭಾಧ್ಯಕ್ಷರುಗಳಾದ ರೊ. ಸುನಿಲ್ ಕುಮಾರ್ ಮತ್ತು ರೊ. ಅನಿಲ್ ಕುಮಾರ್, ಕಾರ್ಯದರ್ಶಿಗಳಾದ ರೊ. ಪಾಂಡುರಂಗ ಲಾಗ್ವಂಕರ್ ಮತ್ತು ರೊ.ಕೃಷ್ಣಪ್ಪ, ದಂಡಪಾಣಿಯವರಾದ ರೊ. ಕೊರಗಪ್ಪ ಶೆಟ್ಟಿಗಾರ್ – ಹೀಗೆ ಪ್ರತಿಯೊಬ್ಬರೂ ಜವಾಬ್ದಾರಿಗಳನ್ನು ಸೂಕ್ತವಾಗಿ ನಿರ್ವಹಿಸಿ ಕಾರ್ಯಕ್ರಮ ಉತ್ತಮವಾಗಿ ಮೂಡಿ ಬರುವಲ್ಲಿ ತಂತಮ್ಮ ಕೊಡುಗೆ ನೀಡಿದರು.



ರೋಟರಿ ಐಸಿರಿಯ ನಿಕಟಪೂರ್ವ ಕಾರ್ಯದರ್ಶಿ ರೊ. ಪಾಂಡುರಂಗ ಲಾಗ್ವಂಕರ್ ಮತ್ತು ಶ್ರೀಮತಿ ಜ್ಯೋತ್ಸ್ನಾ ಪಿ. ಲಾಗ್ವಂಕರ್ ದಂಪತಿಯರ ಪುತ್ರ, ದ್ವಿತೀಯ ಪಿ.ಯು.ಸಿ. ಅಂತಿಮ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾದ ಜೋ. ಪ್ರಭಾತ್ ಪಿ. ಲಾಗ್ವಂಕರ್ ಅವರನ್ನು ಪದಪ್ರದಾನ ಸಮಾರಂಭದಲ್ಲಿ ವೇದಿಕೆಗೆ ಕರೆದು ಗೌರವಿಸಲಾಯಿತು.

**ಅಭಿನಂದನೆಗಳು ಜೋ. ಪ್ರಭಾತ್.**




ರೋಟರಿ ಐಸಿರಿಯ ಸದಸ್ಯರಾದ ರೊ. ನಿಧೀಶ್ ಕುಮಾರ್ ಅವರ ಈ ಛಾಯಾಚಿತ್ರ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿರುವುದು ಹೆಮ್ಮೆಯ ವಿಷಯ.

**ಅಭಿನಂದನೆಗಳು ರೊ. ನಿಧೀಶ್.**



ಜುಲೈ 2ರಂದು ನಡೆದ ಶಾಂತಿನಿಕೇತನ ಆಂಗ್ಲ ಮಾಧ್ಯಮ ಶಾಲೆಯ ಇಂಟರಾಕ್ಟ್ ಕ್ಲಬ್ ಪದಪ್ರದಾನ ಸಮಾರಂಭದಲ್ಲಿ, ಪದಪ್ರದಾನ ಅಧಿಕಾರಿ Past A.G. ರೊ. ಮಂಜುನಾಥ ಉಪಾಧ್ಯರವರು ಪದಪ್ರದಾನ ನೆರವೇರಿಸಿ, ನಾಯಕತ್ವ ಗುಣಗಳನ್ನು ಬೆಳೆಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ರೋಟರಿ ಐಸಿರಿಯ ಯುವಜನಸೇವಾ ನಿರ್ದೇಶಕ ರೊ. ಸುಕೇಶ್ ಕುಂದರ್ ಅವರು ವಿದ್ಯಾರ್ಥಿಗಳು ಉತ್ತಮ ಜೀವನಶೈಲಿ ಬೆಳೆಸಿಕೊಳ್ಳಲು ಕರೆ ನೀಡಿದರು. ಇಂಟರಾಕ್ಟ್ ಸಭಾಪತಿ ರೊ. ಸಂದೀಪ್ ಕುಮಾರ್ ಅವರು ಸಮಯಪ್ರಜ್ಞೆಯ ಬಗ್ಗೆ ಮತ್ತು ಜಾಗೃತ ಮನೋಭಾವದೊಂದಿಗೆ ವಿದ್ಯಾಭ್ಯಾಸವನ್ನು ಪಡೆಯುವ ಅವಶ್ಯಕತೆ ಬಗ್ಗೆ ತಿಳಿಹೇಳಿದರು. ನೂತನ ಇಂಟರಾಕ್ಟ್ ಅಧ್ಯಕ್ಷೆ ಕುಮಾರಿ ಮಾನ್ಯಾರವರು ತಮ್ಮ ಪದಸ್ವೀಕಾರದ ಮಾತುಗಳನ್ನು ಆಡಿ, ತಮ್ಮ ತಂಡವನ್ನು ಪರಿಚಯಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ರೋಟರಿ ಐಸಿರಿಯ ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರು ಯಶಸ್ವಿಯಾಗಿ ಅವಧಿ ಪೂರೈಸಿದಕ್ಕಾಗಿ ನಿರ್ಗಮನ ಅಧ್ಯಕ್ಷ ಮತ್ತು ಕಾರ್ಯದರ್ಶಿಗೆ ಅಭಿನಂದಿಸಿ, ಹೊಸ ಪದಾಧಿಕಾರಿಗಳಿಗೆ ಶುಭ ಕೋರಿದರು. ಶಾಲಾ ಪ್ರಾಂಶುಪಾಲೆ ಶ್ರೀಮತಿ ರೂಪಾ ಡಿ. ಕಿಣಿಯವರು ವಂದನಾರ್ಪಣೆಗೈದರು. ಆರಂಭದಲ್ಲಿ ಇಂಟರಾಕ್ಟ್ ಟೀಚರ್ ಕೋರ್ಡಿನೇಟರ್ ಸುಮನಾ ಬಿ. ಯವರು ಸ್ವಾಗತಿಸಿದರು.

## ಶಾಂತಿನಿಕೇತನ ಆಂಗ್ಲಮಾಧ್ಯಮ ಶಾಲೆಗೆ ಆಪ್ಟಿಕಲ್ ಇನ್ಸ್ಟ್ರುಮೆಂಟ್ ಸೆಟ್ ಕೊಡುಗೆ




ಜುಲೈ 2ರಂದು ಅಲೆವೂರಿನ ಶಾಂತಿನಿಕೇತನ ಆಂಗ್ಲಮಾಧ್ಯಮ ಶಾಲೆಯಲ್ಲಿ ನಡೆದ 2025–26ನೇ ಸಾಲಿನ ಇಂಟರಾಕ್ಟ್ ಕ್ಲಬ್ ಪದಪ್ರದಾನ ಸಮಾರಂಭದಲ್ಲಿ, ನಮ್ಮ ಸದಸ್ಯೆ, ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ ರವರು ಹತ್ತನೇ ತರಗತಿಯ ವಿದ್ಯಾರ್ಥಿಗಳಿಗಾಗಿ ನೀಡಿದ Optical Instrument Set ಅನ್ನು ರೋಟರಿ ಐಸಿರಿ ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರು ಪ್ರಾಂಶುಪಾಲೆ ಶ್ರೀಮತಿ ರೂಪಾ ಡಿ. ಕಿಣಿಯವರಿಗೆ ಹಸ್ತಾಂತರಿಸಿದರು. ಶಾಲೆಯ ಇಂಟರಾಕ್ಟ್ ಸಂಯೋಜಕಿ ಶ್ರೀಮತಿ ಸುಮನಾ ಬಿ. ಯವರು ಉಪಸ್ಥಿತರಿದ್ದರು.

## ಶೆಟ್ಟಿಬೆಟ್ಟು ಶಾಲಾ ವಿದ್ಯಾರ್ಥಿಗಳಿಗೆ ಪ್ರಜಾವಾಣಿ ಶಿಕ್ಷಣದಿಕ್ಸೂಚಿ



ರೋಟರಿ ಐಸಿರಿಯು ಸತತ ಎರಡನೇ ಬಾರಿಗೆ ಶೆಟ್ಟಿಬೆಟ್ಟು ಸರಕಾರಿ ಸಂಯುಕ್ತ ಪ್ರೌಢಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಪ್ರಜಾವಾಣಿ ಶಿಕ್ಷಣದಿಕ್ಸೂಚಿಯ ವಾರ್ಷಿಕ ಚಂದಾದಾರಿಕೆ ಯನ್ನು ಕೊಡುಗೆಯಾಗಿ ನೀಡಿತು. ಈ ಕಾರ್ಯಕ್ರಮದ ಅಧ್ಯಕ್ಷತೆ ರೊ. ಅನಿಲ್ ಕುಮಾರ್ ವಹಿಸಿದ್ದರು. ಪ್ರಜಾವಾಣಿಯ ಪ್ರಸರಣ ವಿಭಾಗದ ಪ್ರತಿನಿಧಿ ಸತೀಶ್ ಕೆ, ರೋಟರಿ ಐಸಿರಿಯ ಯುವಜನಸೇವಾ ನಿರ್ದೇಶಕರಾದ ರೊ. ಸುಕೇಶ್ ಕುಂದರ್, ಸಮುದಾಯಸೇವಾ ನಿರ್ದೇಶಕರಾದ ರೊ. ಪ್ರಕಾಶ್ ಶೆಣೈ ಹಾಗೂ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರಾಮಕೃಷ್ಣ ನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



**ಸಂದರ್ಶನ:** ರೋಟರಿ ಐಸಿರಿ ಪರ್ಕಳದ ನೂತನ ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರನ್ನು ಪತ್ನಿ ಶ್ರೀಮತಿ ಗೌತಮಿ, ಸುಪುತ್ರ ಪವಿತ್, ಅಣ್ಣ ಶ್ರೀ ಸುನೀಲ್, ಅತ್ತಿಗೆ ಶ್ರೀಮತಿ ಸಂಧ್ಯಾ, ಅಣ್ಣನ ಮಗಳು ಗಾನವಿ ಮತ್ತು ಅಮ್ಮ ಶ್ರೀಮತಿ ಲಕ್ಷ್ಮೀಯವರೊಂದಿಗಿರುವ ಅವರ ಕೂಡು ಕುಟುಂಬದ ಮನೆಯಲ್ಲಿಯೇ ಸಂದರ್ಶಿಸುವ ಅವಕಾಶ ನನಗೆ ದೊರೆಯಿತು.

ನಮಸ್ಕಾರ ಸರ್, ಹಲವಾರು ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿರುವ ನಿಮಗೆ ರೋಟರಿ ಸಂಸ್ಥೆಗೆ ಸೇರಲೇನು ಪ್ರೇರಣೆ ?

ಅನಿರೀಕ್ಷಿತವಾಗಿ ಅವಕಾಶಗಳು ಬಂದಾಗ ಬೇರೆಬೇರೆ ಸಂಘಸಂಸ್ಥೆಗಳಲ್ಲಿ ನನ್ನನ್ನು ನಾನು ತೊಡಗಿಸಿಕೊಂಡೆ. ಇಲ್ಲಿ ನನ್ನ ವೈಯಕ್ತಿಕ ಏಳಿಗೆಯ ಜೊತೆಗೆ ಸಾಮಾಜಿಕ ಸೇವೆಗೆ ಅವಕಾಶ ದೊರೆಯಿತು. ರೋಟರಿ ಐಸಿರಿಯಲ್ಲೂ ಅಂತಹುದೇ ಅವಕಾಶ ಬಂತು. ನನ್ನ ಆತ್ಮೀಯರೆಲ್ಲರು ಸೇರಿ ಕಟ್ಟಿದ ರೋಟರಿ ಐಸಿರಿಯಲ್ಲೂ ಅವರ ಧ್ಯೇಯೋದ್ದೇಶಗಳ ಜೊತೆಗೆ ನಿಲ್ಲುವ ಹಂಬಲದಿಂದ ಸೇರಿದೆ.

ಎಷ್ಟು ಸಮಯದಿಂದ ಅಧ್ಯಕ್ಷ ಹುದ್ದೆಗೆ ತಯಾರಿ ನಡೆಸುತ್ತಿದ್ದೀರಿ….? ಅಧ್ಯಕ್ಷ ಹುದ್ದೆ ನಿಭಾಯಿಸುವಲ್ಲಿ Pre–PELS ಮತ್ತು PELS ಪಾತ್ರವೇನು…?

ಇಂದೊಂದು ಅದ್ಭುತವಾದ ಪ್ರಶ್ನೆ. ಏಕೆಂದರೆ ಯಾವುದೇ ಸಂಸ್ಥೆಗಳಲ್ಲಿ ಮೇಲ್ಸ್ತರದ ಹುದ್ದೆಯನ್ನು ಪಡೆಯುವಾಗ ನಮ್ಮ ತಯಾರಿ ಹಾಗೂ ನಿಗದಿತ ಸಂಸ್ಥೆಯ ತರಬೇತಿ ಅತ್ಯಂತ ಮುಖ್ಯವಾದ ವಿಚಾರ. ಪ್ರಮುಖವಾಗಿ ರೋಟರಿ ಐಸಿರಿ ತನ್ನ ಮುಂದಿನ ಎರಡು ಸಾಲಿನ ಅಧ್ಯಕ್ಷರನ್ನು ಹಾಗೂ ಕಾರ್ಯದರ್ಶಿಯವರನ್ನು ಆಯ್ಕೆ ಮಾಡಿರುವುದರಿಂದ ಮಾನಸಿಕವಾಗಿ ತಯಾರಾಗಿರುತ್ತೇವೆ. ಮತ್ತು ನಿಕಟಪೂರ್ವ ಅಧ್ಯಕ್ಷರಾದ ರೋ. ಸುನಿಲ್ ಕುಮಾರ್ ಅವರು ತಮ್ಮ ಅವಧಿಯಲ್ಲಿ ನಡೆದ ಎಲ್ಲಾ ಕಾರ್ಯದಲ್ಲೂ ನನ್ನನ್ನು ತೊಡಗಿಸಿ ಕೊಂಡಿರುವುದರ ಜೊತೆಗೆ ಎಲ್ಲಾ ಹಿರಿಯ ರೋಟೇರಿಯನ್ನರ ಮಾರ್ಗದರ್ಶನದಿಂದ ನಾನು ಅಧ್ಯಕ್ಷ ನಾಗಿ ಆಯ್ಕೆಯಾದಂದಿನಿಂದ ಸೂಕ್ತ ತಯಾರಿ ಮಾಡುತ್ತಿದ್ದೇನೆ.

ಹಾಗೆಯೇ Pre–PELS ಮತ್ತು PELS ಒಂದೊಳ್ಳೆಯ ತರಬೇತಿ. ಈ ಮೊದಲೇ ನನಗೆ ಈ ತರಬೇತಿಯ ವಿಚಾರವನ್ನು ತಿಳಿಸಿರುವುದರಿಂದ, ಇದರಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಲು ಸುಲಭವಾಯಿತು. ಈ ತರಬೇತಿ ಕಾರ್ಯಾಗಾರ ವೈಯಕ್ತಿಕ ಪ್ರೇರಣೆಯ ಜೊತೆಗೆ ಕ್ಲಬ್ ಮುನ್ನಡೆಸುವ ಬಗ್ಗೆ ಅದ್ಭುತವಾದ ತರಬೇತಿ ನೀಡಿದೆ. ಇದು ಅಧ್ಯಕ್ಷ ಸ್ಥಾನ ಅಲಂಕರಿಸುವ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿತು.

ಬ್ಯುಸಿಯಾಗಿ ಇರುವವರೇ ಜೀವನದಲ್ಲಿ ಯಶಸ್ಸನ್ನು ಕಾಣುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ….. ಅಂತೆಯೇ, ಬಹಳಷ್ಟು ಬ್ಯುಸಿ ಇರುವ ನೀವು, ನಿಮ್ಮ ವ್ಯವಹಾರಗಳು, ಇತರ ಸಂಘ ಸಂಸ್ಥೆಗಳ ಜವಾಬ್ದಾರಿ, ಕುಟುಂಬ, ಜೊತೆಗೆ ರೋಟರಿ ಅಧ್ಯಕ್ಷತೆಯನ್ನು ಸಹ ಹೊತ್ತಿರುವುದು, ಸದಾ ಬ್ಯುಸಿ ಬ್ಯುಸಿ ಎನ್ನುವವರಿಗೆ ನೀವು ನೀಡುವ ಸಂದೇಶವೇನು?

ಇಂಥ ಬಿಝಿ ದಿನಚರಿಯೊಂದಿಗೆ ಇನ್ನೊಂದು ಜವಾಬ್ದಾರಿ ಬೇಕಾ? ಎಂದು ನಾನು ಕೂಡ ಎಣಿಸಿದ್ದೆ. ಏಕೆಂದರೆ, ನಾನು ಪ್ರಸ್ತುತ ಇರುವ ಒಂದು ಸಂಘದಲ್ಲಿ ಕೈಗೊಂಡಿರುವ ಕಾಮಗಾರಿ ಪೂರ್ವ ಯೋಜನೆಯಂತೆ ಪೂರ್ಣಗೊಳಿಸಲು ವಿಳಂಬವಾಗಿದೆ. ಹಾಗೂ ಕೋವಿಡ್ ನಂತರದ ವ್ಯವಹಾರಗಳಲ್ಲಿನ ವ್ಯತ್ಯಾಸದಿಂದ ಇರುವ ಜವಾಬ್ದಾರಿಗಳಿಗೆ ಹೆಚ್ಚಿನ involvement ಬೇಕಾಗಿದೆ. ಆದರೆ, ಇಂಥಾ ಬಿಝಿ ದಿನಚರಿಯೊಂದಿಗೆ ಯಾರೇ ಆದರೂ ಹೆಚ್ಚಿನ ಜವಾಬ್ದಾರಿ ತೆಗೆದು ಕೊಳ್ಳುವುದರಿಂದ ಅವರ ಮನೋಬಲ ಹೆಚ್ಚಾಗುತ್ತದೆ, ವೈಯಕ್ತಿಕವಾಗಿ ಹೆಚ್ಚು ಪ್ರಬುದ್ಧತೆಯೊಂದಿಗೆ ಬೆಳೆಯಲು ಅನುಕೂಲವೇ ಆಗುತ್ತದೆ. ನಾವು ಒಂದೇ ಕೆಲಸ ಮಾಡುವಾಗ bore ಆಗುವುದು ಹೆಚ್ಚು. ಅದೇ ವೈವಿಧ್ಯಮಯ ಕೆಲಸಗಳಲ್ಲಿ ತೊಡಗಿಸಿಕೊಂಡಾಗ ಸಿಗುವ ಪ್ರೇರಣೆಯಿಂದ ಒಳ್ಳೆಯ ಪ್ರತಿಫಲ ದೊರೆಯುತ್ತದೆ. ಎಲ್ಲೆಡೆ ಯಶಸ್ಸು ಸಾಧಿಸಲು ಸಾಧ್ಯ ವಾಗುತ್ತದೆ. ಹೀಗಾಗಿ ವಿವಿಧ ಜವಾಬ್ದಾರಿಗಳು ಒಂದು ವಿಧದಲ್ಲಿ ಪ್ರೇರಕ ಕೂಡ. ಅದರಿಂದನೆ may be ನೀವು ಹೇಳಿದ ಹಾಗೆ ಬಿಝಿ ಇರುವವರು ಯಶಸ್ಸು ಕಾಣುತ್ತಾರೆ ಇರಬೇಕು. ಮುಖ್ಯವಾಗಿ ನಮ್ಮ ಮನಸನ್ನು ನಾವು ಬಿಝಿ ದಿನಚರಿಗೆ ಹೊಂದಿಸಿಕೊಳ್ಳುತ್ತೇವೆ ಎಂಬ ಅಛಲ ನಿರ್ಧಾರ ಹಾಗೂ ಪ್ರತಿನಿತ್ಯವೂ ದಿನಚರಿಯನ್ನು ಸಮರ್ಪಕವಾಗಿ ಪ್ಲಾನ್ ಮಾಡಿದರೆ ಬಿಝಿ ಬಿಝಿ ಎಂದು ಹೇಳಬೇಕಾಗಿ ಬರುವುದಿಲ್ಲ.

ನಿಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಏನೇನು ಮಾಡಬೇಕೆಂದಿದ್ದೀರಿ…?

ಮುಖ್ಯವಾಗಿ ನನ್ನ ಹಿಂದಿನ ಎಲ್ಲಾ ಅಧ್ಯಕ್ಷರ ಯೋಜನೆಗಳಿಗೆ ಕಡಿಮೆಯಾಗದ ರೀತಿಯಲ್ಲಿ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸ ಬೇಕೆಂದು ಇದ್ದೇನೆ.

ಗೌತಮಿ ಮೇಡಂ, ನಿಮ್ಮ ಪತಿಯವರು ಅಂತರಾಷ್ಟ್ರೀಯ ಸಂಸ್ಥೆಯ ಅಂಗವಾದ ರೋಟರಿ ಐಸಿರಿಯ ಅಧ್ಯಕ್ಷರಾಗಿರುವುದರ ಬಗ್ಗೆ ನಿಮಗೆ ಏನನಿಸುತ್ತಿದೆ..?

ತುಂಬಾ ಖುಷಿಯನಿಸಿದೆ. ಮೊದಲಿಂದಲೂ ಅವರ ನಿತ್ಯದ ದಿನಚರಿಯಲ್ಲಿ ಬಿಝಿಯಾಗೇ ಇದ್ದವರು. ಜೊತೆಗೆ ನಮ್ಮದು ಕೂಡುಕುಟುಂಬ. ಹಾಗಾಗಿ ಅವರ ಬಿಝಿ ದಿನಚರಿಯಿಂದ ವ್ಯಕ್ತಿಗತವಾಗಿ ತೊಂದರೆ ಆಗುವ ಬದಲಿಗೆ, ಹೆಚ್ಚಿನ ಪ್ರಬುದ್ಧತೆಗೆ ಆಸ್ಪದವಾಗಬಹುದು. ಆದರೆ ಒತ್ತಡಗಳಿಂದ ಅವರ ಆರೋಗ್ಯದ ಕಾಳಜಿ ಮತ್ತು ಮಗನ ಜೊತೆ ದಿನದಲ್ಲಿ ಒಂದು ಹೊತ್ತು ಆಟ ಆಡಬೇಕು. ಇದಕ್ಕೆ ಅವರು ಕಾಲ ವಿನಿಯೋಗಿಸುವಂತೆ ನೋಡಿಕೊಳ್ಳುವ ಒಂದು ಜವಾಬ್ದಾರಿ ಮಾತ್ರ ನನ್ನದು.

ಸಮಯ ನೀಡಿಕ್ಕಾಗಿ ಧನ್ಯವಾದಗಳು. ಶುಭವಾಗಲಿ.